ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಅಂಕೋಲಾ

ಸಿ ಸಿ ನಂ.357 ಃ2015

ಫಿರ್ಯಾದಿಃ -ವಿರುದ್ಧ- ಆರೋಪಿತರುಃ

ಅಂಕೋಲಾ ಪೋಲೀಸ್ ಠಾಣೆ 1. ಲಕ್ಷ್ಮಣ ತಂದೆ ಚುಡಿಯಾ ನಾಯ್ಕ
( ಎಲ್ ಸಿ ನಾಯ್ಕ), ವೃತ್ತಿಃ ವ್ಯವಹಾರ,
ಸಾಃ ಬೊಬ್ರುವಾಡ, ಅಂಕೋಲಾ.

**ಆಪಾದನೆ**

ದಿನಾಂಕ 09-04-2014 ರಂದು 1.55 ಗಂಟೆ ಸಮಯದಲ್ಲಿ ಅಂಕೋಲಾ ಶಹರದ ಮಾನ್ಯ ಜೆ.ಎಂ.ಎಫ್.ಸಿ ಅಂಕೋಲಾರವರ ನ್ಯಾಯಾಲಯದ ಆವರಣದಲ್ಲಿ ಆರೋಪಿತನಾದ ನೀನು ಫಿರ್ಯಾದಿಯನ್ನು ತನ್ನ ಹೆಂಡತಿ ಶೀಲಾ ನಾಯ್ಕ ಇವರ ಪ್ರಕರಣದ ವಿಷಯವಾಗಿ ಸಾಕ್ಷಿ ನುಡಿದರೆ ನಿನ್ನನ್ನು ಮುಗಿಸಿ ಬಿಡುತ್ತೇನೆ, ಬೋಳಿ ಮಗನೇ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಮಾಡಿ ಹಾಕುತ್ತೇನೆ ಅಂತಾ ಜೀವದ ಬೆದರಿಕೆ ಹಾಕಿರುತ್ತೀರಿ. ಆದ್ದರಿಂದ ನೀವು ಭಾ ದಂ ಸಂ ಕಲಂ 504 ಮತ್ತು 506 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಿ.

ಪ್ರಶ್ನೆ.1: ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾದ ಆಪಾದನೆ ಬಗ್ಗೆ ನಿಮಗೆ ಅರ್ಥವಾಯಿತೇ?

ಉತ್ತರಃ ತಿಳಿಯಿತು

ಪ್ರಶ್ನೆ 2: ಮೇಲ್ಕಂಡ ಅಪರಾಧಗಳಿಗೆ ಸಂಬಂಧಪಟ್ಟಂತೆ ತಪ್ಪು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆ ಆಗಬೇಕು ಅಂತ ಬಯಸುತ್ತೀರಾ?

ಉತ್ತರ: ತಪ್ಪು ಒಪ್ಪಿಕೊಳ್ಳುವುದಿಲ್ಲ, ವಿಚಾರಣೆಯಾಗಬೇಕು

(ಮೇಲಿನ ಆಪಾದನೆಯನ್ನು ಆರೋಪಿಗೆ ಬಹಿರಂಗ ನ್ಯಾಯಾಲಯಲ್ಲಿ ಓದಿ ಹೇಳಿ ತಿಳಿಸಿ ಆತನು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.)

ದಿನಾಂಕಃ21–07–2018 **(ಶಂಭುಲಿಂಗಯ್ಯ ಮೂಡಿಮಠ್)**

ಅಂಕೋಲಾ ಪ್ರ ದ ನ್ಯಾ ದಂ, ಅಂಕೋಲಾ